## ಶಿಶುವಿವಾಹ ಪ್ರತಿಬಂಧಕ (ಕರ್ನಾಟಕ ತಿದ್ದುಪಡಿ) ವಿಧೇಯಕ, 2004

### ಪರ್ಯಾಲೋಚನಾ ಪ್ರಸ್ತಾವ

**ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು):** ಮಾನ್ಯ ಅಧ್ಯಕ್ಷರೆ, 2004ನೇ ಸಾಲಿನ ಶಿಶುವಿವಾಹ ಪ್ರತಿಬಂಧಕ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

### ಪ್ರಸ್ತಾವವನ್ನು ಮಂಡಿಸಲಾಯಿತು

## (ii) ಭಾರತದ ರಾಷ್ಟ್ರೀಯ ಕಾನೂನು ವಿದ್ಯಾಲಯ (ತಿದ್ದುಪಡಿ) ವಿಧೇಯಕ, 2004

### ಪರ್ಯಾಲೋಚನಾ ಪ್ರಸ್ತಾಪ

**ಶ್ರೀ ಆರ್.ವಿ. ದೇಶಪಾಂಡೆ (ಭಾರೀ ಮತ್ತು ಮಧ್ಯಮ ಕೈಗಾರಿಕಾ ಸಚಿವರು) (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರ ಪರವಾಗಿ):** ಮಾನ್ಯ ಅಧ್ಯಕ್ಷರೆ, "ಕರ್ನಾಟಕ ವಿಧಾನ ಪರಿಷತ್ತಿನ ಅಂಗೀಕೃತವಾದ ರೂಪದಲ್ಲಿರುವ 2004ನೇ ಸಾಲಿನ ಭಾರತದ ರಾಷ್ಟ್ರೀಯ ಕಾನೂನು ವಿದ್ಯಾಲಯ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ."

### ಪ್ರಸ್ತಾವವನ್ನು ಮಂಡಿಸಲಾಯಿತು

**ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು):** ಮಾನ್ಯ ಅಧ್ಯಕ್ಷರೆ, ಈ ವಿಧೇಯಕ ಕೌನ್ಸಿಲ್‌ನಲ್ಲಿ ಈಗಾಗಲೇ ಪಾಸ್ ಆಗಿದೆ, ಸರ್ಚ್ ಕಮಿಟಿಯವರು ಒಂದು ಸಜೆಷನ್ ಮಾಡಿದ್ದರು, ಇದೊಂದು ನ್ಯಾಷನಲ್ ಲೆವಲ್ ಇನ್‌ಸ್ಟಿಟ್ಯೂಟ್, ಇದಕ್ಕೆ ನಮ್ಮ ಭಾರತದ ಚೀಫ್ ಜಸ್ಟೀಸ್‌ಗೆ ನಾವು ಡಿ ಲೆಟ್ ಎಂದು ಕರೆಯುತ್ತೇವೆ. ಮತ್ತು ಅಲ್ಲಿಯ ಇನ್‌ಸ್ಟಿಟ್ಯೂಟ್ ಹೆಡ್‌ಗೆ ನಾವು ಡೈರೆಕ್ಟರ್ ಎಂದು ಕರೆಯುತ್ತೇವೆ. ಸರ್ಚ್ ಕಮಿಟಿಯವರು ಒಂದು ಸಜೆಷನ್ ಕೊಟ್ಟು, ತಾವು ಡೈರೆಕ್ಟರ್‌ಗೆ ವೈಸ್ ಛಾನ್ಸಲರ್ ಎಂದು ನಾಮಕರಣ ಮಾಡಿ, ಚೀಫ್ ಜಸ್ಟೀಸ್ ವಿಸಿಟರ್ ಇದ್ದಾರೆ ಅವರನ್ನು ಛಾನ್ಸಲರ್ ಎಂದು ನಾಮಕರಣ ಮಾಡಿ ಎಂದು ಹೇಳಿದರು. ಆ ಪ್ರಕಾರ ಜಸ್ಟ್ ನಾಮಿಕ್ಲೇಚರ್ ಬದಲಾವಣೆ ಮಾಡುವುದಕ್ಕೆ ಒಂದು ಪ್ರಸ್ತಾವನೆ ಇದೆ, ಅದನ್ನು ಒಪ್ಪಿಕೊಳ್ಳಬೇಕೆಂದು ತಮ್ಮ ಮುಖಾಂತರ ನಾನು ವಿನಂತಿ ಮಾಡುತ್ತೇನೆ.

†**ಶ್ರೀ ಜಯಪ್ರಕಾಶ್ ಹೆಗಡೆ (ಬ್ರಹ್ಮಾವರ):** ಮಾನ್ಯ ಅಧ್ಯಕ್ಷರೆ, ಇದು ಯೂನಿವರ್ಸಿಟಿ ಅಲ್ಲ, ಇದು ಲಾ ಸ್ಕೂಲ್, ಎಲ್ಲಾ ವಿಶ್ವವಿದ್ಯಾನಿಲಯಗಳಿಗೆ ಛಾನ್ಸಲರ್ ವೈಸ್ ಛಾನ್ಸಲರ್ ಎಂದು ಕರೆಯುತ್ತೇವೆ. ಲಾ ಸ್ಕೂಲ್ ಒಂದಕ್ಕೆ ಛಾನ್ಸಲರ್ ಮತ್ತು ವೈಸ್ ಛಾನ್ಸಲರ್ ಏಕೆ ಬೇಕಾಗುತ್ತದೆ ಎಂದು. ಒಂದು ವೇಳೆ ಇದನ್ನು ಡೀಮ್ಡ್ ಯೂನಿವರ್ಸಿಟಿ, ಯೂನಿವರ್ಸಿಟಿ ಮಾಡಿ ಆ ನಂತರ ಬದಲಾವಣೆ ಮಾಡಿ. ಕೇವಲ ಒಂದು ಸಂಸ್ಥೆಗೆ ಇದನ್ನು ಬದಲಾವಣೆ ಮಾಡಿದರೆ, ಪ್ರಾಯಶಃ ಇನ್ನು ಅನೇಕ ಸಂಸ್ಥೆಗಳಿಂದ ಬೇಡಿಕೆ ಬರುತ್ತದೆ. ನಮ್ಮದೂ ಇದೇ ರೀತಿ ಮಾಡಿ ಎಂದು ರಾಜ್ಯದಲ್ಲಿರುವಂತಹ ಇನ್ನೂ ಅನೇಕ ಸಂಸ್ಥೆಗಳು ಇದನ್ನು ಕೇಳಲಿಕ್ಕೆ ಪ್ರಾರಂಭ ಮಾಡುತ್ತಾರೆ. ಆದ್ದರಿಂದ, ಇದು ಯೋಗ್ಯವಲ್ಲವೆಂಬುದು ನನ್ನ ಅಭಿಪ್ರಾಯ. ಕೇವಲ ಒಂದು ಶಾಲೆಗೆ ಛಾನ್ಸಲರ್, ವೈಸ್ ಛಾನ್ಸಲರ್ ಎಂದು ಮಾಡುವುದು ಒಳ್ಳೆಯದಲ್ಲವೆಂಬುದು ನನ್ನ ಅಭಿಪ್ರಾಯ.

---

† ಈ ಚಿಹ್ನೆ ಮಾನ್ಯ ಸದಸ್ಯರ ಭಾಷಣ ಹಾಗೂ ಟಿಪ್ಪಣಿಗಳನ್ನು ಪರಿಷ್ಕರಿಸಿಲ್ಲವೆಂದು ಸೂಚಿಸುತ್ತದೆ.

**ಶ್ರೀ ಎಸ್. ಸುರೇಶ್‌ಕುಮಾರ್ (ರಾಜಾಜಿನಗರ)**: ಮಾನ್ಯ ಅಧ್ಯಕ್ಷರೇ, ಮಾನ್ಯ ಜಯಪ್ರಕಾಶ್ ಹೆಗಡೆಯವರು ಯಾವ ಅಭಿಪ್ರಾಯವನ್ನು ವ್ಯಕ್ತಮಾಡಿದರೋ ಅದೇ ಅಭಿಪ್ರಾಯವನ್ನು ನಾನೂ ಕೂಡ ವ್ಯಕ್ತಮಾಡುತ್ತೇನೆ. ಮಾನ್ಯ ಸಚಿವರ ಉತ್ತರ ಕೊಡುತ್ತಾ ಚೀಫ್ ಜಸ್ಟೀಸ್ ಆಫ್ ಇಂಡಿಯಾ ಯಾರಿದ್ದಾರೋ ಅವರು ವಿಸಿಟರ್ ಎಂದು ಹೇಳಿ ಅದಕ್ಕೆ ಚಾನ್ಸಲರ್ ಎಂದು ಹೇಳಿ ಡೈರಕ್ಟರ್‌ರವರನ್ನು ವೈಸ್ ಚಾನ್ಸಲರ್ ಎಂದು ಸೂಚಿಸಿದ್ದಾರೆ. Howsoever higher post he may be ಒಬ್ಬರು ವಿಸಿಟರ್‌ರವರು ಚಾನ್ಸಲರ್ ಆಗಿ ಅಲ್ಲಿರುವ ಡೈರಕ್ಟರ್‌ರವರು ವೈಸ್ ಚಾನ್ಸಲರ್ ಆಗುವುದು somehow ಅದು ಅರ್ಥ ಆಗದೇ ಇರುವ ಒಂದು ವಿಚಾರ. ವಿಸಿಟರ್ ವೈಸ್ ಚಾನ್ಸಲರೋ, ಚಾನ್ಸಲರೋ ಆಗಿದ್ದರೆ ಒಂದು ಅರ್ಥ ಇರುತ್ತಿತ್ತು. ಇನ್ನು ಎರಡನೆಯದಾಗಿ ಮಾನ್ಯ ಹೆಗಡೆಯವರು ಹೇಳಿದ ಹಾಗೆ ಇದು ಒಂದು ಶಾಲೆ. ನೀವು ಹೇಳಿರಬಹುದು ಒಂದು Namenclature ಮಾತ್ರ ಚೇಂಜ್ ಆಗುತ್ತದೆಯೇ ಹೊರತು ಆರ್ಥಿಕವಾಗಿ ಬರ್ಡನ್ ಆಗುವುದಿಲ್ಲ, ಯಾವುದೇ ಹೆಚ್ಚಿನ ವೆಚ್ಚ ಉಂಟಾಗುವುದಿಲ್ಲ ಎಂದು ಆದರೆ unless this National Law School is converted into an University ಆ ಪೋಸ್ಟ್‌ಗಳಿಗೆ ನೀವು ಚಾನ್ಸಲರ್ ಮತ್ತು ವೈಸ್ ಚಾನ್ಸಲರ್ ಎಂದು ಕರೆಯುವುದು ಯಾವ ರೀತಿಯಿಂದ ಸೂಕ್ತ ಎಂಬುದು ನನಗಂತೂ ಅನ್ನಿಸುತ್ತಿಲ್ಲ. ನಿಜ, ಚೀಫ್ ಜಸ್ಟೀಸ್‌ರವರು ವಿಸಿಟರ್ ಆಗುತ್ತಾರೆ, ಆಮೇಲೆ ಡೈರಕ್ಟರ್, ಇಡೀ ದೇಶದಲ್ಲಿ ಇದೊಂದು ಬಹಳ ಪ್ರೆಸ್ಟೀಜಿಯಸ್ ಇನ್‌ಸ್ಟಿಟ್ಯೂಶನ್ ಇದು, ಈ ವಿಚಾರವನ್ನು ನಾವೆಲ್ಲರೂ ಸಂಪೂರ್ಣವಾಗಿ ಒಪ್ಪಲೇಬೇಕಾಗುತ್ತದೆ. ಏಕೆಂದರೆ ಬಹಳ ಹೆಮ್ಮೆ ತರಬಹುದಾದ ಇನ್‌ಸ್ಟಿಟ್ಯೂಶನ್ ಇದಾಗಿದೆ. ಏಕೆಂದರೆ ನ್ಯಾಶನಲ್ ಲಾ ಸ್ಕೂಲ್‌ನಿಂದ ಬಂದಿರುವ ಪ್ರಾಡಕ್ಟ್‌ಸ್ನು ನೋಡಿದರೆ ನಮಗೆ ಖುಷಿಯಾಗುತ್ತದೆ. ಅಂತರರಾಷ್ಟ್ರೀಯ ಮಟ್ಟದಲ್ಲೂ ಹೋಗಿದ್ದಾರೆ, ಇಂಟರ್‌ನ್ಯಾಷನಲ್ ಲಾನಲ್ಲಂತೂ ಬಹಳ ಪರಿಣಿತರಾಗಿದ್ದಾರೆ. ಆದರೆ ನಮ್ಮದನ್ನೂ ಕೂಡ ಈ ಒಂದು ಆ್ಯಂಗಲ್‌ನಿಂದ ನಾವು ನೋಡಬೇಕಾಗುತ್ತದೆ. ನನಗೆ ಒಂದು ವಿಚಾರ ತಿಳಿದುಬಂತು. ಪೇಪರ್ಸ್ ಲೈಡ್ ಕಮಿಟಿ ಎನ್ನುವ ನಮ್ಮದೊಂದು ಕಮಿಟಿ ಇದೆ. ಆ ಕಮಿಟಿಯಿಂದ ಈ ನ್ಯಾಶನಲ್ ಲಾ ಸ್ಕೂಲ್‌ಗೆ ನಿಮ್ಮ ಅಕೌಂಟ್ಸ್‌ನ್ನು ಸಬ್‌ಮಿಟ್ ಮಾಡಿ ಎಂದು ಕಳುಹಿಸಿದಾಗ plainly, they have refused ನಾವು ಅಕೌಂಟ್ಸ್‌ನ್ನು ಸಬ್‌ಮಿಟ್ ಮಾಡುವುದಿಲ್ಲ we are not answerable to the Legislature ಎಂದು ಹೇಳಿದ್ದಾರೆ. If, I am right it is the creature of the statute ನಮ್ಮ ರಾಜ್ಯ ಸರ್ಕಾರದಿಂದ ಅನುಮತಿ ಕೊಟ್ಟಿರುವುದರಿಂದ ಅದು ಆಗಿರುವುದು. But, we are not answerable ನಾವು ಅಕೌಂಟ್ಸ್‌ನ್ನೂ ಕೂಡ ಕೊಡುವುದಿಲ್ಲವೆನ್ನುವ ಒಂದು ಮನೋಭಾವವನ್ನು ಅವರು ತೋರಿಸಿದ್ದಾರೆ. ಹೀಗಿರುವಾಗ ಅಲ್ಲಿ ಚಾನ್ಸಲರ್ ಮತ್ತು ವೈಸ್ ಚಾನ್ಸಲರ್ ಎಂದು ಮಾಡಿಬಿಟ್ಟರೆ ಇನ್ನಷ್ಟು ಅವರನ್ನು ಹಿಡಿಯುವುದಕ್ಕೇ ಆಗುವುದಿಲ್ಲ. ಅದಕ್ಕೆ ನಾನು ತಮ್ಮ ಮುಖಾಂತರ ಸರ್ಕಾರಕ್ಕೆ ಹೇಳುವುದೇನೆಂದರೆ, ನಿಜ, ಸರ್ಚ್ ಕಮಿಟಿ ಬಂದು ಹೇಳಿದೆ, ಸರ್ಚ್ ಕಮಿಟಿ ಅನೇಕ ಸಂಗತಿಗಳನ್ನು ಹೇಳಿರುತ್ತದೆ. ಇವೊತ್ತೇನಿದೆ ನಿರ್ದೇಶಕ ಮತ್ತು ಸಂದರ್ಶಕ ಬೇರೆ ಬೇರೆ ನಮ್ಮ ಕಾಲೇಜುಗಳಿಗೆ ಇರುವ ರೀತಿಯಲ್ಲಿ ಅದು ಕಂಟಿನ್ಯೂ ಆಗಲಿ. ಒಂದೇ ಒಂದು ಶಾಲೆ, I think ಅಲ್ಲಿ ಕೇವಲ 60

ಜನ ಸ್ಟೂಡೆಂಟ್ಸ್ ಇರುವುದು, just sixty students ಅದರಲ್ಲೂ ಕೂಡ ನಮ್ಮ ರಾಜ್ಯದವರು ಸಿಗುವುದು ಎಂಟರಿಂದ ಹತ್ತು ಸ್ಟೂಡೆಂಟ್ಸ್. I am not talking about that ಹೀಗಿರುವಾಗ ಒಂದು ಇನ್ಸ್ಟ್ಯೂಶನ್‌ಗೋಸ್ಕರ ನಾವು ಆ ಪೋಸ್ಟ್‌ಗಳನ್ನೇ ಚೇಂಜ್ ಮಾಡಿ ಚಾನ್ಸಲರ್, ವೈಸ್ ಚಾನ್ಸಲರ್ ಎಂದು ಮಾಡಿಬಿಡುವುದು ಅಷ್ಟು ಸೂಕ್ತವಲ್ಲವೆಂದು ನನ್ನ ಪ್ರಾಮಾಣಿಕವಾದ ಅನಿಸಿಕೆಯಾಗಿದೆ. ಸರ್ಕಾರ ಇದನ್ನು ಮನಗಂಡು ಈ ರೀತಿ ಬದಲಾಯಿಸದೇ ಇರುವುದು ಒಳ್ಳೆಯದು ಎಂದು ನನ್ನ ಅನಿಸಿಕೆಯನ್ನು ತಮ್ಮ ಮುಂದೆ ಇಡುತ್ತಿದ್ದೇನೆ.

**ಶ್ರೀ ಕೆ.ಜಯಪ್ರಕಾಶ್ ಹೆಗಡೆ**: ಮಾನ್ಯ ಅಧ್ಯಕ್ಷರೇ, ನನ್ನದು ಇನ್ನೂ ಒಂದು ಸಲಹೆ ಇದೆ. ಈಗ ರಾಜೀವ್‌ಗಾಂಧಿ ಮೆಡಿಕಲ್ ಯುನಿವರ್ಸಿಟಿ ಮಾಡಿದ್ದಾರೆ, ವಿಶ್ವೇಶ್ವರಯ್ಯ ಟೆಕ್ನಿಕಲ್ ಯುನಿವರ್ಸಿಟಿ ಮಾಡಿದ್ದಾರೆ. ಅದೇ ರೀತಿ ಎಲ್ಲಾ ಲಾ ಕಾಲೇಜುಗಳನ್ನು ಒಂದುಗೂಡಿಸಿ ಕಾನೂನು ವಿಶ್ವವಿದ್ಯಾಲಯ ಎಂದು ಮಾಡಿದರೆ ಆಗ ಈ ಒಂದು ಬದಲಾವಣೆಯನ್ನು ತರಬಹುದು.

**ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು)**: ಮಾನ್ಯ ಅಧ್ಯಕ್ಷರೇ, ಮಾನ್ಯ ಸುರೇಶ್ ಕುಮಾರ್‌ರವರು ಮತ್ತು ಮಾನ್ಯ ಜಯಪ್ರಕಾಶ್‌ಹೆಗಡೆಯವರು ಈಗಾಗಲೇ ಅನೇಕ ವಿಚಾರಗಳನ್ನು ಹೇಳಿದ್ದಾರೆ. ಯುನಿವರ್ಸಿಟಿ ಎಂದು ಆದಾಗ ಬೇಕಾದರೆ ಈ ಒಂದು ರೀತಿಯ ಗೌರವಗಳನ್ನು ಕೊಡಬಹುದು ಎನ್ನುವುದು ಒಂದು ವಿಚಾರ. ಇವೊತ್ತು ನಮ್ಮ ರಾಜ್ಯದಲ್ಲಿ ಈ ರೀತಿಯ ಒಂದು ಕಾನೂನು ವಿದ್ಯಾಲಯ ಇದೆ ಅದೇ ರೀತಿಯಲ್ಲಿ ರಾಷ್ಟ್ರದ ಬೇರೆ ಬೇರೆ ಭಾಗದಲ್ಲೂ ಕೂಡ ಇವೆ. ಅಲ್ಲಿ ಇದೇ ರೀತಿ ಅಡಾಪ್ಟ್ ಮಾಡಿಕೊಂಡಿದ್ದಾರೋ ಹೇಗೆ ಎಂಬುದನ್ನು ನೋಡಬೇಕಾಗುತ್ತದೆ. ನಮ್ಮ ರಾಜ್ಯದಲ್ಲಿ ಬೆಂಗಳೂರಿನಲ್ಲಿರುವಂಥ ಕಾನೂನು ವಿದ್ಯಾಲಯ ಏನಿದೆ ಅದಕ್ಕೆ ಮಾತ್ರ ನೀವು ಈ ರೀತಿ ಅನ್ವಯ ಮಾಡಿಕೊಳ್ಳುತ್ತಿದ್ದೀರಿ. ಬೇರೆ ಬೇರೆ ಭಾಗದಲ್ಲೂ ಕೂಡ ಶಾಸನಕ್ಕೆ ತಿದ್ದುಪಡಿ ತಂದು ಪೋಸ್ಟ್‌ಗಳನ್ನು ಕ್ರಿಯೇಟ್ ಮಾಡಿದ್ದಾರೋ ಅಥವಾ ಇಲ್ಲವೋ ಎಂಬ ಬಗ್ಗೆ ಸರ್ಕಾರ ಸ್ಪಷ್ಟೀಕರಣ ಕೊಟ್ಟರೆ ಒಳ್ಳೆಯದು. ವಿಶ್ವವಿದ್ಯಾಲಯ ಎಂದಾಗ ಮಾತ್ರ ಅದಕ್ಕೆ ತಕ್ಕಂತೆ ಆ ಸ್ಥಾನಮಾನಗಳಿಗೆ ತಕ್ಕಂತೆ ಈ ರೀತಿಯ ಹುದ್ದೆಗಳನ್ನು ನಾವು ನಿರ್ಮಾಣ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಆದರೆ ಇದು ಕೇವಲ ಒಂದು ವಿದ್ಯಾಲಯ ಆಗಿರುವುದರಿಂದ ಆ ಸ್ಟೇಟಸ್ ಕೊಡುವುದು ಸರಿಯಾಗುವುದಿಲ್ಲ. ಆದಕಾರಣ ಮೊದಲು ಈ ಬಗ್ಗೆ ಸ್ಪಷ್ಟೀಕರಣ ಕೊಡುವುದು ಒಳ್ಳೆಯದು.

**ಶ್ರೀ ಆರ್.ವಿ. ದೇಶಪಾಂಡೆ**: ನಾನು ಈಗಾಗಲೇ ಹೇಳಿದ ಹಾಗೆ ಇದೊಂದು ನ್ಯಾಶನಲ್ ಲೆವೆಲ್ ಇನ್‌ಸ್ಟಿಟ್ಯೂಟ್. ಈಗ ನಾವೇನು ಅಮೆಂಡ್‌ಮೆಂಟ್ ಮೂವ್ ಮಾಡಿದ್ದೇವೆ ಈ ಅಮೆಂಡ್‌ಮೆಂಟ್ is not moved by the Government, because Government wants. Search committee, which is headed by Supreme Court Judge. ಅವರು ರೆಕಮೆಂಡ್ ಮಾಡಿ ಡೈರಕ್ಟರ್ ಪೋಸ್ಟ್‌ಗೆ ವೈಸ್ ಚಾನ್ಸ್‌ಲರ್ ಎಂದು ಹೆಸರು ಕೊಡಿ ಮತ್ತು ಚೀಫ್ ಜಸ್ಟೀಸ್ ಆಫ್ ಇಂಡಿಯಾ ಎಂದು ಏನಿದ್ದಾರೆ ಅವರು ವಿಸಿಟರ್ ಇದ್ದಾರೆ; ಅವರನ್ನು ಚಾನ್ಸ್‌ಲರ್ ಮಾಡಿ ಎಂದು this is the recommendation by the search committee

headed by Supreme Court Judge. ಆದ್ದರಿಂದ ಸರ್ಕಾರವೇ ಮುಂದಾಗಿ ಈ ರೀತಿ ತಿದ್ದುಪಡಿ ಮಾಡುತ್ತಿಲ್ಲ. ಇನ್ನು ಎರಡನೆಯದಾಗಿ ನಾನು ತಿಳಿದುಕೊಂಡಿರುವ ಪ್ರಕಾರ to the best of my knowledge this is the only National Law School in the country. ಲಾ ಕಾಲೇಜುಗಳು ಬಹಳ ಇವೆ. ಹೀಗಾಗಿ ಬೇರೆ ಕಡೆ ಇಂಥ ಅಮೆಂಡ್‌ಮೆಂಟ್ ಪ್ರಶ್ನೆ ಬರುವುದಿಲ್ಲ ಎಂದು ನನಗನ್ನಿಸುತ್ತದೆ. ಈಗ ಇದಕ್ಕಾಗಿಯೇ ಯುನಿವರ್ಸಿಟಿ ಮಾಡಬೇಕು, ಇದರ ವ್ಯಾಪ್ತಿಯೊಳಗೆ ಎಲ್ಲಾ ಲಾ ಕಾಲೇಜುಗಳನ್ನು ತೆಗೆದುಕೊಂಡು ಬರಬೇಕು ಎನ್ನುವ ಸಲಹೆ ಏನು ಬಂದಿದೆ ಅದನ್ನು ನಾವು ಪರಿಶೀಲನೆ ಮಾಡುತ್ತೇವೆ. ಇನ್ನು ತಾವು ಪಿಟಿಶನ್ ಕಮಿಟಿಗೆ ಎಕ್ಸ್‌ಪೆಂಡಿಚರ್ ವಿವರಗಳನ್ನು ಕೊಟ್ಟಿಲ್ಲವೆಂದು ಏನು ತಾವು ಹೇಳಿದಿರೋ ಅದರ ಬಗ್ಗೆ ಮಾಹಿತಿಯನ್ನು ತರುವುದಕ್ಕೆ ನಾನು ಹೇಳಿದ್ದೇನೆ. ಆ ಸೂಕ್ತವಾದ ಮಾಹಿತಿ ಬಂದವಮೇಲೆ ನಾನು ತಮಗೆ ತಿಳಿಸುತ್ತೇನೆ. It is just an amendment, on the advise of the Search Committee, headed by Supreme Court Judge. ಹೀಗಾಗಿ ಇದಕ್ಕೆ ಸದನ ಒಪ್ಪಿಕೊಳ್ಳಬೇಕೆಂದು ಅಧ್ಯಕ್ಷರ ಮೂಲಕ ನಾನು ವಿನಂತಿ ಮಾಡುತ್ತೇನೆ.

**ಶ್ರೀ ಕೆ. ಜಯಪ್ರಕಾಶ್ ಹೆಗಡೆ:** ಮಾನ್ಯ ಅಧ್ಯಕ್ಷರೇ, ಇಲ್ಲೀನಾಗುತ್ತದೆಂದರೆ ನ್ಯಾಶನಲ್ ಲಾ ಸ್ಕೂಲ್ ಆಫ್ ಇಂಡಿಯಾ, ಇದು ಬೇರೆ ಬೇರೆ ಕಡೆಯಲ್ಲಿದೆ. ಚೀಫ್ ಜಸ್ಟೀಸ್ ಆಫ್ ಇಂಡಿಯಾ ಏನಿದ್ದಾರೆ ಅವರು ಎಲ್ಲಾ ಸ್ಕೂಲ್‌ಗಳಿಗೂ ವೈಸ್ ಚಾನ್ಸಲರ್ ಆಗುವುದಕ್ಕಿಂತ let us suggest ಎಲ್ಲಾ ಲಾ ಸ್ಕೂಲ್ ಆಫ್ ಇಂಡಿಯಾಗೆ ಒಬ್ಬರನ್ನು ಮಾಡಿ ಒಂದೇ ಯುನಿವರ್ಸಿಟಿಯನ್ನಾಗಿ ಮಾಡಲಿ. ಪ್ರತಿ ಯುನಿವರ್ಸಿಟಿಗೂ ಒಬ್ಬರೇ ವೈಸ್ ಚಾನ್ಸಲರ್ ಆಗಿರುವುದಕ್ಕಿಂತ ಎಲ್ಲಾ ಲಾ ಶಾಲೆಗಳನ್ನು Let them bring all these schools under one University ಅವರನ್ನು ವೈಸ್ ಚಾನ್ಸಲರನ್ನಾಗಿ ಮಾಡಿ ಚೀಫ್ ಜಸ್ಟೀಸ್ ಆಫ್ ಇಂಡಿಯಾದವರನ್ನು ಅದಕ್ಕೆ ಚಾನ್ಸ್‌ಲರ್‌ನ್ನಾಗಿ ಮಾಡಿ ಮತ್ತು ಇವರನ್ನೆಲ್ಲಾ ವೈಸ್ ಚಾನ್ಸ್‌ಲರನ್ನಾಗಿ ಮಾಡಿ.

**ಅಧ್ಯಕ್ಷರು:** ಪ್ರಸ್ತಾಪ ಏನೆಂದರೆ,

"ಕರ್ನಾಟಕ ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 2004ರ ಭಾರತದ ರಾಷ್ಟ್ರೀಯ ಕಾನೂನು ವಿದ್ಯಾಲಯ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು)

**ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು**

**ಖಂಡ 2 ರಿಂದ 3ರವರೆಗೆ**

**ಅಧ್ಯಕ್ಷರು:** ಪ್ರಸ್ತಾವ ಏನೆಂದರೆ:– "ಖಂಡ 2 ರಿಂದ 3 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು)

(ಖಂಡ 2 ರಿಂದ 3ರವರೆಗೆ, ಎರಡೂ ಸೇರಿದಂತೆ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು: ಪ್ರಸ್ತಾವ ಏನೆಂದರೆ:

"ಮೊಬಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು)

(ಮೊಬಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮ ಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು).

ಶ್ರೀ ಕುಮಟಹಳ್ಳಿ ಕೆ. ಶ್ರೀನಿವಾಸಗೌಡ: ಮಾನ್ಯ ಅಧ್ಯಕ್ಷರೇ, ಪ್ರಸ್ತಾವನೆಗೆ ಹೌದು ಎನ್ನುವವರ ಪಟವಾಗಿದೆ ಎಂದು ನೀವು ಹೇಳಿದಿರಿ. ಆದರೆ ನೀವು ಆ ರೀತಿ ಹೇಳಿದ ನಂತರ ಕೂಡ ಒಬ್ಬರೂ ಹೌದು ಎಂದು ಹೇಳಲೇ ಇಲ್ಲ.

ಸೊಂದಲ

ಅಧ್ಯಕ್ಷರು: ಹೌದು ಎಂದು ಯಾರೋ ಇಬ್ಬರು ಹೇಳಿದ್ದಾರೆ. ಸ್ವೀಕರ್ ನೋಡುತ್ತಾರೆ ಯಾವ ಪಡೆ ಮೆಜಾರಿಟಿ ವೋಟರ್ಸ್ ಇದ್ದಾರೆ ಎಂದು. ಮೆಜ್ಯಾರಿಟಿ ಡಿವಿಶನ್‌ಗೆ ಆದರೂ ಕೂಡ ಅವರು ಗೆಲ್ಲುವ ಹಾಗೆ ಇದ್ದರೆ ನಾವು ಹೇಳಬಹುದು, ಈಗಾಗಲೇ ಹೌದು ಎಂಬ ಇಬ್ಬರು ಹೇಳಿದ್ದಾರೆ.

ಶ್ರೀ ಶ್ರೀನಿವಾಸಗೌಡ ಕೆ. ಕುಮಟಹಳ್ಳಿ: ಮಾನ್ಯ ಅಧ್ಯಕ್ಷರೇ, ನೀವು ಹೌದು ಎನ್ನುವವರ ಪಟವಾಗಿದೆ ಎಂಬ ಹೇಳಿದ ಮೇಲೆ ಹೌದು ಎಂದು ಅವರುಗಳು ಹೇಳಬೇಕಲ್ಲವೇ? ಈಗ ಅವರು 'ಹೌದು' ಎಂದು ಹೇಳುತ್ತಾರೆ. ಆದರೆ ಆವಾಗಲೇ ಅವರ್‍ಯಾರೂ ಹೌದು ಎಂಬ ಬಾಯಿ ಬಿಡಲಿಲ್ಲ. ಆಗ ಯಾರು ಬಾಯಿ ಬಿಡಲಾರರು ಈಗ ಎಲ್ಲರೂ ಬಾಯಿ ಬಿಡುತ್ತಿದ್ದಾರೆ.

ಶ್ರೀ ಯು.ಆರ್. ಸಭಾಪತಿ: ಹೌದು ಎಂದು ನಾವು ಹೇಳಿದ್ದೇವೆ. ಆದರೆ ಅವರು ಕೇಳಿಸಿಕೊಂಡಿಲ್ಲ. ಅದ್ದರಿಂದ ಅವರಿಗೆ ಮೊದಲು ಇಯರ್ ಫೋನ್ ಕೊಡಿ. ಗೌತರೇ, ತಾವು ಸ್ವಲ್ಪ ಇಯರ್ ಫೋನ್ ಹಾಕಿಕೊಳ್ಳಿ.

ಶ್ರೀ ಎಸ್.ಎಸ್. ಪಾಟೀಲ್: ಹೌದು ಎಂಬ ಹೇಳಬೇಕೆನ್ನುವ ಕಡೆ ಅವರುಗಳಿಗೆ ಲಕ್ಷ್ಯವೇ ಇಲ್ಲ.

ಅಧ್ಯಕ್ಷರು: ಆಯಿತು ಬಿಡಿ. ಏನ್ರಿ ಏನ್ ಕೆಲಸ ಮಾಡುತ್ತೀರಪ್ಪಾ ನೀವು, ಹೌದು ಎಂದು ಹೇಳುವುದಕ್ಕೆ ನಿಮಗೆ ಆಗುವುದಿಲ್ಲವೇ?

ಶ್ರೀ ಯು.ಆರ್. ಸಭಾಪತಿ: ನಾವು ಹೇಳಿದ್ದೇವೆ. ಕೇಳಿಸಿಕೊಳ್ಳದಿದ್ದರೆ ನಾವೇನು ಮಾಡುವುದು ಹೇಳಿ.

ಅಧ್ಯಕ್ಷರು: ಆಯಿತಲ್ಲಾ, ಕೊನೆಯ ದಿನಸ ಸುಮ್ಮನೇ ಈ ಬಗ್ಗೆ ಮಾತನಾಡುವುದು ಬೇಡ.

ಶ್ರೀ ಎಸ್. ಸುರೇಶ್‌ಕುಮಾರ್: ಮಾನ್ಯ ಅಧ್ಯಕ್ಷರೇ, ಒಂದೇ ಒಂದು ದುರಂತ ಎಂದರೆ ಕೊನೆಯ ದಿನ. ಅವ್ರೊಕ್ಕೂ ಕೂಡ ಸ್ವೀಕರ್ ಹೇಳಿಕೊಡಬೇಕು, ಹೌದು ಎಂದು ಹೇಳಿರಿ ಎಂದು. ಆ ಪರಿಸ್ಥಿತಿ ಬಂದು ಬಿಟ್ಟಿದೆ.

ಶ್ರೀ ಯು.ಆರ್. ಸಭಾಪತಿ: ಮಾನ್ಯ ಅಧ್ಯಕ್ಷರೆ, ವಿರೋಧ ಪಕ್ಷದವರಿಗೆ ಇಯರ್ ಫೋನ್ ಕೊಡುವುದು ಒಳ್ಳೆಯದು.

**ಅಧ್ಯಕ್ಷರು:** ಆಯಿತು. ಪುನಃ ಪ್ರಾರಂಭ ಮಾಡುತ್ತೇನೆ.

ಖಂಡ 1 ಇತ್ಯಾದಿ

**ಅಧ್ಯಕ್ಷರು:** ಪ್ರಸ್ತಾವ ಏನೆಂದರೆ, "ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

**ಪ್ರಸ್ತಾಪದ ಅಂಗೀಕಾರ**

**ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು):** ಮಾನ್ಯ ಅಧ್ಯಕ್ಷರೆ, "ಕರ್ನಾಟಕ ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 2004ನೇ ಸಾಲಿನ ಭಾರತದ ರಾಷ್ಟ್ರೀಯ ಕಾನೂನು ವಿದ್ಯಾಲಯ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ."

**ಅಧ್ಯಕ್ಷರು:** ಪ್ರಸ್ತಾವ ಏನೆಂದರೆ, "ಕರ್ನಾಟಕ ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 2004ನೇ ಭಾರತದ ರಾಷ್ಟ್ರೀಯ ಕಾನೂನು ವಿದ್ಯಾಲಯ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**ಅಧ್ಯಕ್ಷರು:** ಈಗ ಶ್ರೀಕಂಠಯ್ಯನವರ ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕವನ್ನು ತೆಗೆದುಕೊಳ್ಳೋಣ.

**ಶ್ರೀ ಎಸ್.ಎಸ್. ಪಾಟೀಲ್:** ಮಾನ್ಯ ಅಧ್ಯಕ್ಷರೇ, ಇದನ್ನು ಕೊನೆಯಲ್ಲಿ ತೆಗೆದುಕೊಂಡರೆ ಚೆನ್ನಾಗಿರುತ್ತದೆ.

**ಅಧ್ಯಕ್ಷರು:** ಅವರದ್ದು ಬೇರೆ, ಅದನ್ನು ಕೊನೆಯಲ್ಲೇ ತೆಗೆದುಕೊಳ್ಳುವುದು.

**(ii) ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕ, 2004**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಹೆಚ್. ವಿಶ್ವನಾಥ್ (ಸಹಕಾರ ಸಚಿವರು) (ಕಂದಾಯ ಸಚಿವರ ಪರವಾಗಿ):** ಮಾನ್ಯ ಅಧ್ಯಕ್ಷರೆ, "ಕರ್ನಾಟಕ ವಿಧಾನಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 2004ನೇ ಸಾಲಿನ ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ."

**ಪ್ರಸ್ತಾವವನ್ನು ಮಂಡಿಸಲಾಯಿತು**

**ಅಧ್ಯಕ್ಷರು:** ಈಗ ತಾವು ಮುಖ್ಯವಾದ ಪಾಯಿಂಟ್‌ಗಳನ್ನು ಹೇಳಿ.

**ಶ್ರೀ ಹೆಚ್. ವಿಶ್ವನಾಥ್:** ಮಾನ್ಯ ಅಧ್ಯಕ್ಷರೆ, ಅಕ್ರಮ ಸಕ್ರಮ ಭೂಮಿಗಳನ್ನು ಯಾರು ಸಾಗುವಳಿ ಮಾಡುತ್ತಿದ್ದರು, ಅಂತಹವರಿಗೆ ಸಕ್ರಮ ಮಾಡುವಂತಹ ಅವಧಿ ಕೊನೆ ಆಗುತ್ತಿರುವುದರಿಂದ ಮತ್ತು ಚುನಾವಣೆಗಳು ಹತ್ತಿರ ಬರುತ್ತಿರುವುದರಿಂದ, ಶಾಸಕರು ಇಬಕ್ಕೆ ಅಧ್ಯಕ್ಷರಾಗಿ ಕೆಲಸ